<u>ಒ.ಎಸ್.ನಂಬ್ರ: 205/2014</u> <u>ಪಿ.ಡಬ್ಲ್ಯೂ: 1</u>

ದಿನಾಂಕ: 11-03-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟಿ ಸವಾಲು: 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಮ್ ಎಸ್ ಎಸ್ ರವರಿಂದ</u>

ದಾವಾ ಸರ್ವೆ ನಂಬರಗೆ ಸಂಬಂಧಪಟ್ಟಂತೆ ಈ ನ್ಯಾಯಾಲಯದಲ್ಲಿ ನಾವು ಇದೊಂದೆ ದಾವೆಯನ್ನು ಹಾಕಿರುತ್ತೇವೆ. 1 ಮತ್ತು 2 ನೇ ಪ್ರತಿವಾದಿಗಳು ನನ್ನ ಹೆಂಡತಿ ಮತ್ತು ಅವರ ಒಡಹುಟ್ಟಿದವರ ಮೇಲೆ ಓ ಎಸ್ ನಂ. 237/2013 ರಂತೆ ಈ ದಾವೆಯ ಸ್ವತ್ತಿನಲ್ಲಿ 89 ಸೆಂಟ್ಸ ಮತ್ತು ಇತರೆ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಅಧೀರಕುಮಾರ ಹೆಗ್ಡೆರವರು ನನ್ನ ಹೆಂಡತಿ ಮತ್ತು ಅವರ ಒಡಹುಟ್ಟಿದವರ ಮೇಲೆ ಓ ಎಸ್ ನಂ. 243/2014 ರಂತೆ ವಿಭಾಗವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನ ಮೂಲ ಸರ್ವೆ ನಂ.118/9 ಆಗಿದ್ದು, ಅದು ವಿಭಜನೆಯ ನಂತರ 118/9 ಎ ಮತ್ತು 118/9 ಬಿ ಎಂದು ಆಗಿದೆ ಎಂದರೆ ಸರಿ. ಓ ಎಸ್ ನಂ.243/2014 ರ ದಾವೆಯಲ್ಲಿ ಈ ದಾವಾ ಸ್ವತ್ತಿನ ಮೂಲ ಸರ್ವೆ ನಂ.118/9 ರ ವಿಭಾಗವನ್ನು ಕೇಳಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸರ್ವೆ ನಂ.118/9 ರ ಒಟ್ಟು ವಿಸ್ತೀರ್ಣ 2 ಎಕರೆ 51 ಸೆಂಟ್ಸ ಆಗಿರುತ್ತದೆ. ಅದರಲ್ಲಿ ಸರ್ವೆ ನಂ.1189 ಬಿ 4 ಸೆಂಟ್ಸ ರಸ್ತೆ ಆಗಿದೆ ಎಂದರೆ ಸರಿ. ಅದರಲ್ಲಿ ಈಗ ಸರ್ವೆ ನಂ. 118/9 ಎ ರಲ್ಲಿ 2 ಎಕರೆ 47 ಸೆಂಟ್ಸ ಉಳಿದಿದೆ ಎಂದರೆ ಸರಿ. ನನ್ನ ಅತ್ತೆಗೆ ರುಕ್ಮೀಣಿ ಶೆಡ್ತಿರವರು ಮಾರಾಟ ಮಾಡಿರುತ್ತಾರೆ. ಕೃಷ್ಣಪ್ಪಾ ಶೆಟ್ಟಿರವರಿಗೆ ದಾವಾ ಸ್ವತ್ತಿನ ಮೂಲ ಸರ್ವೆ ನನಂ.118/9 2 ಎಕರೆ 51 ಸೆಂಟ್ಸ ದರಕಾಸ್ತು ಮೂಲಕ ಮಂಜೂರಾಗಿರುತ್ತದೆ. ದರಕಾಸ್ತು ಆದೇಶದ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನಿ.ಪಿ.3 ರ ಕ್ರಯ ಪತ್ರದಲ್ಲಿ ಕೃಷ್ಣಪ್ಪಾ ಶೆಟ್ಟಿರವರಿಗೆ ದಾವಾ ಸ್ವತ್ತಿನ ಮೂಲ ಸರ್ವೆ ನಂಬರ ದರಕಾಸ್ತು ಮೂಲಕ ಮಂಜೂರಾಗಿರುವುದು ಕಂಡುಬರುತ್ತದೆ. ದಾವಾ ಸ್ವತ್ತಿನ ಮೂಲ ಸರ್ವೆ ನಂಬರ ಕೃಷ್ಣಪ್ಪಾ ಶೆಟ್ಟಿರವರ ಸ್ವಂತ ಆಸ್ತಿಯಾಗಿರಲಿಲ್ಲ ಎಂದರೆ ಸರಿಯಲ್ಲ.

ದಾವಾ ಸರ್ವೆ ನಂಬರ ಸಟ್ವಾಡಿ ಅಳಿಯ ಸಂತಾನ ಕುಟುಂಬದ ಅನಾದಿ ಜಮೀನು ಎಂದರೆ ಸರಿಯಲ್ಲ. ಕೃಷ್ಣಪ್ಪಾ ಶೆಟ್ಟಿರವರ ಸ್ವಂತ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಕೃಷ್ಣಪ್ಪಾ ಶೆಟ್ಟಿರವರ ಸ್ವಂತ ಆಸ್ತಿ ಆಗದೇ ಇರುವ ಕಾರಣ ಯಾವುದೇ ದಾಖಲೆ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ ಸರ್ಕಾರಿ ಜಮೀನು ಆಗಿತ್ತು. ನಿ.ಪಿ.2 ರ ದಾಖಲೆಯನ್ನು ಯಾರು ನೀಡಿದ್ದಾರೆ ಎಂದು ಈಗ ನೆನಪಿಲ್ಲ. ನಿ.ಪಿ.2 ರ ದಾಖಲೆಯಲ್ಲಿ ಕೃಷ್ಣಪ್ಪಾ

ಶೆಟ್ಟರವರಿಗೆ ದರಕಾಸ್ತು ಮೂಲಕ ಮಂಜೂರಾಗಿರುವುದಾಗಿ ಕಂಡುಬರುವುದಿಲ್ಲ ಎಂದರೆ ಸರಿ. ನಿ.ಪಿ.2 ರ ದಾಖಲೆ ನ್ಯಾಯಯುತವಾದ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಿ.ಪಿ.5 ರಿಂದ ನಿ.ಪಿ.9 ರ ಪಹಣಿಗಳಲ್ಲಿ ಕೃಷ್ಣಪ್ಪಾ ಶೆಟ್ಟರವರ ಹೆಸರು ಮತ್ತು ದರಕಾಸ್ತಿನ ಮೂಲಕ ಮಂಜೂರಾಗಿರುವುದಾಗಿ ಕಂಡುಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿ.ಪಿ.2 ರಿಂದ ನಿ.ಪಿ.10 ರ ದಾಖಲೆಗಳಲ್ಲಿ ಕೃಷ್ಣಪ್ಪಾ ಶೆಟ್ಟರವರಿಗೆ ದರಕಾಸ್ತು ಮೂಲಕ ಮಂಜೂರಾಗಿರುವುದಾಗಿ ಕಂಡುಬರುವುದಿಲ್ಲ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ದಿಃ 20-02-1945 ರಲ್ಲಿ ನೊಂದಾಯಿತ ವಿಭಾಗ ಪತ್ರ ಆಗಿದೆ ಎಂದರೆ ಸಾಕ್ಷಿ ಅದಕ್ಕೂ ನನಗೂ ಸಂಬಂಧ ಇಲ್ಲ ಎಂದು ನುಡಿದಿರುತ್ತಾರೆ. ಆ ವಿಭಾಗ ಪತ್ರವನ್ನು ನಾನು ನೋಡಿರುವುದಿಲ್ಲ. ಓ ಎಸ್ 237/2013 ರ ದಾವೆಯಲ್ಲೂ ಕೂಡ ಈ ವಿಭಾಗ ಪತ್ರದ ಬಗ್ಗೆ ತಿಳಿಸಿದ್ದಾರೆ ಎಂದರೆ ಸರಿ. ಓ ಎಸ್ ನಂ.237/2013 ರ ದಾವೆಯಲ್ಲಿ ಸಟ್ವಾಡಿ ಕೃಷ್ಣಪ್ಪಾ ಶೆಟ್ಟರವರು ಕೂಡ ಪಕ್ಷಗಾರರಾಗಿದ್ದಾರೆ ಎಂದರೆ ಸರಿ. ಸರ್ವೆ ನಂ.118/9 2 ಎಕರೆ 30 ಸೆಂಟ್ಸ ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. 1945 ರ ವಿಭಾಗ ಪತ್ರದಲ್ಲಿ ಸರ್ವೆ ನಂ.118/9 2 ಎಕರೆ 30 ಸೆಂಟ್ಸ ಜಾಗವನ್ನು ಲಕ್ಷ್ಮೀ ಸೆರ್ವೆಗಾರರವರಿಗೆ ನೀಡಲಾಗಿದೆ ಎಂದರೆ ಸಾಕ್ಷಿ ಏನು ಹೇಳಿರುವುದಿಲ್ಲ.

ದಿಃ 16-07-1952 ರಲ್ಲಿ ಮತ್ತೊಂದು ವಿಭಾಗ ಪತ್ರ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದಲ್ಲಿ ಗೌರಮ್ಮ ಶೆಡ್ತಿರವರ ಕವರಿಗೆ ಸರ್ವೆ ನಂ. 118/9 93 ಸೆಂಟ್ಸ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಉಡುಪಿಯ ನ್ಯಾಯಾಲಯದಲ್ಲಿ ಓ ಎಸ್ ನಂ.15/1972 ರಂತೆ ದಾವೆ ಸಲ್ಲಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ಸಿ ಶೆಡ್ಯೂಲ ಪ್ರಕಾರ ಸರ್ವೆ ನಂ.118/9 ರಲ್ಲಿ 93 ಸೆಂಟ್ಸ ಜಾಗ ಲಕ್ಷ್ಮೀ ಶೆಡ್ತಿರವರ ಭಾಗಕ್ಕೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಲಕ್ಷ್ಮೀ ಶೆಡ್ತಿರವರನ್ನು ನೋಡಿರುವುದಿಲ್ಲ. ಈ 93 ಸೆಂಟ್ಸ ಜಾಗದಲ್ಲಿ 4 ಸೆಂಟ್ಸ ಜಾಗವನ್ನು ರಸ್ತೆಗಾಗಿ ಉಪಯೋಗಿಸುತ್ತಿದ್ದಾರೆ ಎಂದರೆ ಅವರು ಮಾಡಿಕೊಂಡಿರಬಹುದು. ಸರ್ವೆ ನಂ.118/9 ರಲ್ಲಿ ಉಳಿದ ಜಾಗ ಲಕ್ಷ್ಮೀ ಶೆಡ್ತಿರವರ ಕುಟುಂಬದ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ.

ಸರ್ವೆ ನಂ.118/9 ರಲ್ಲಿ ಒಂದು ಕೆರೆ ಇದೆ ಎಂದರೆ ಸರಿ. ಆ ಕೆರೆ 73 ಸೆಂಟ್ಸ ಇದೆ ಎಂದರೆ ನನಗೆ ವಿಸ್ತೀರ್ಣ ಗೊತ್ತಿಲ್ಲ. ಈ ಸರ್ವೆ ನಂಬರನಲ್ಲಿ ಒಂದು ಅಂಶ ರತ್ನಾವತಿರವರ ಕವರಿನ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ಕಲ್ಪಿಸಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**